ದಿನಾಂಕಃ 27.07.2026 ರಂದು ಸಾಕ್ಷಿದಾರರಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ವಕೀಲರಿಂದ:**

1. ಬಣಕಲ್ ಗ್ರಾಮದ ಸರ್ವೆ ನಂ.216 ರ ಒಟ್ಟು ಸಾವಿರ ಎಕರೆ ಜಮೀನು ಇದೆ.

2. ನನ್ನ ತಂದೆಯ ಹೆಸರು ಮಂಜಯ್ಯ. ನನ್ನ ತಾತನ ಹೆಸರು ಈರಯ್ಯ.

3. ಈರಯ್ಯರವರಿಗೆ 4 ಜನ ಮಕ್ಕಳು. ಮಂಜಯ್ಯ, ಕೃಷ್ಣಪ್ಪ, ಹುರುಕಲಮ್ಮ ಮತ್ತು ಇನ್ನೊಬ್ಬ ಹೆಣ್ಣು ಮಗಳ ಹೆಸರು ಗೊತ್ತಿಲ್ಲ.

4. ನನ್ನ ತಂದೆ ಮಂಜಯ್ಯರವರಿಗೆ 7 ಜನ ಮಕ್ಕಳು. ವಿನೋದ, ಅಣ್ಣಪ್ಪ, ರಮೇಶ, ರತ್ನ, ಚಂದ್ರಪ್ಪ, ಲೋಕಪ್ಪ, ಮೀನಾಕ್ಷಿ.

5. ಬಣಕಲ್ ಗ್ರಾಮದ ಸರ್ವೆ ನಂ.216 ರಲ್ಲಿ ಕುಟುಂಬದ ಅಣ್ಣಪ್ಪರವರಿಗೆ 2 ಎಕರೆ ಮಂಜೂರಾಗಿರುತ್ತದೆ.

6. ಈರಯ್ಯರವರಿಗೆ ಬಣಕಲ್ ಗ್ರಾಮದ ಸರ್ವೆ ನಂ.216 ರಲ್ಲಿ ಜಮೀನು ಮಂಜೂರಾಗಿರುವುದಿಲ್ಲ. ಸರ್ವೆ ನಂ.223 ರಲ್ಲಿ 4 ಎಕರೆ 30 ಗುಂಟೆ ತರಿ ಜಮೀನು ಮಂಜೂರಾಗಿರುತ್ತದೆ.

7. ಬಣಕಲ್ ಗ್ರಾಮದ ಸರ್ವೆ ನಂ.216 ರಲ್ಲಿ ನನ್ನ ತಂದೆ ಮಂಜಯ್ಯರವರಿಗೆ ಜಮೀನು ಮಂಜೂರು ಆಗಿರುವುದಿಲ್ಲ.

8. ವಾದಿಯವರ ಅಜ್ಜ ಕಾಳಯ್ಯ ಕುಟುಂಬವೇ ನಿಮ್ಮ ಅಜ್ಜನ ಕುಟುಂಬವೇ ಬೇರೆ ಎಂದರೆ ಸರಿ.

9. ಕೆ. ಮಂಜಯ್ಯ ರವರ ವಾದಿ ಆನಂದರವರ ದೊಡ್ಡಪ್ಪ ಎಂದರೆ ನನಗೆ ಗೊತ್ತಿಲ್ಲ.

10. ಕೆ. ಮಂಜಯ್ಯರವರಿಗೆ ಬಣಕಲ್ ಗ್ರಾಮದ ಸರ್ವೆ ನಂ.216 ರಲ್ಲಿ 2 ಎಕರೆ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಮೇಲೆ ನನಗೆ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿ.

11. ವಾದಿಯ ಅಜ್ಜ ಕಾಳಯ್ಯರವರಿಗೆ ಕೆ. ಮಂಜಯ್ಯ ಮತ್ತು ಕೆ. ಸುಬ್ಬಯ್ಯರವರು ಮಕ್ಕಳ ಎಂದರೆ ನನಗೆ ಗೊತ್ತಿಲ್ಲ.

12. ಸುಬ್ಬಯ್ಯರವರ ಮಕ್ಕಳು ಬೊಮ್ಮಪ್ಪ ಮತ್ತು ವಾದಿ ಆನಂದ ಎಂದರೆ ಸರಿ.

13. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ.

14. ಬಣಕಲ್ ಪೋಲಿಸ್ ಠಾಣೆಗೆ ನಮ್ಮ ಕಂದಾಯ ದಾಖಲಾತಿಗಳು ಕಳೆದು ಹೋದ ಬಗ್ಗೆ ದೂರು ದಾಖಲಿಸಿಲ್ಲ. ತಕರಾರು ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸದರಿ ವಿಚಾರವನ್ನು ಬರೆಸಿಲ್ಲ.

15. ಬಣಕಲ್ ಗ್ರಾಮದ ಸರ್ವೆ ನಂ.216 ರಲ್ಲಿ ನಿಮಗೆ ಸಂಬಂದಪಟ್ಟ ಯಾವುದೇ ಕಂದಾಯ

ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಕ್ರಮ ಸಕ್ರಮಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

16. ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆನಂದರವರ ಮೇಲೆ ದಾಖಲೆಗಳನ್ನು ಸೃಷ್ಟಿಸಿಕೊಂಡ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದೇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ.

17. ನಿಡಿ-6 ರಿಂದ 10 ಕಂದಾಯ ದಾಖಲೆಗಳು ಕೆ. ಮಂಜಯ್ಯ ಬಿನ್ ಕಾಳಯ್ಯರವರಿಗೆ ಸೇರಿದ್ದು ಎಂದರೆ ಸರಿಯಲ್ಲ.

18. ನಿಡಿ-2 ಮತ್ತು ನಿಡಿ-3 ಕ್ರಯಪತ್ರಗಳು ನಿಮ್ಮ ಕುಟುಂಬಕ್ಕೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿ. ಸದರಿ ಕ್ರಯಪತ್ರಗಳು ಆನಂದರವರ ಕುಟುಂಬಕ್ಕೆ ಸಂಬಂದಪಟ್ಟದು ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳ ಮೇಲೆ ತಾಲ್ಲೂಕು ಕಚೇರಿಗೆ ದೂರು ನೀಡಿರುತ್ತೇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕ್ರಯಪತ್ರ ಆಸ್ತಿಗಳ ಮೇಲೆ ನಿಮಗೆ ಹಕ್ಕು ಇಲ್ಲ ಎಂದರೆ ಸರಿ.

19. ನಿಡಿ-1 ಫೋಟೋವನ್ನು ಯಾರು ಮೊಬೈಲಿನಲ್ಲ್ ತೆಗೆದಿದ್ದೀರಾ ಎಂದರೆ ನನ್ನ ಮೊಬೈಲನಲ್ಲಿ ತೆಗೆದಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು 2025 ರಲ್ಲಿ ತೆಗೆದಿರುತ್ತೇನೆ. ದಿನಾಂಕ ನೆನಪಿಲ್ಲ. ಸದರಿ ಫೋಟೋಗೆ ಸಂಬಂದಪಟ್ಟಂತೆ ಪ್ರಮಾಣ ಪತ್ರ ಸಲ್ಲಿಸಿದ್ದೀರಾ ಎಂದರೆ ಹೌದು.

20. ನೀವು ಮತ್ತು ನಿಮ್ಮ ಅಣ್ಣ ಅಣ್ಣಪ್ಪರವರ ನಡುವೆ ತುಂಬಾ ವರ್ಷದಿಂದ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಿಗೆರೆಯಲ್ಲಿ ಸದರಿ ಪ್ರಕರಣಗಳಲ್ಲಿ ಇಬ್ಬರಿಗೂ ಸಹ ಶಿಕ್ಷೆಯಾಗಿದೆ ಎಂದರೆ ಸರಿಯಲ್ಲ.

21. ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಿಗೆರೆಯಲ್ಲಿ ಪ್ರಕರಣಗಳು ಇವೆ ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.